'ಅಮಿತ್...' ಅಂತ ಅಂದೆ. ಉತ್ತರ ಇಲ್ಲ. ಗಾಬರಿಗೊಂಡೆ. ಬಾಗಿಲು ಬಡಿದು ನೋಡಿದೆ. ಅವರೂ ಇಬ್ಬರು ಬಂದು ಅಮಿತ್ ಅಂದರು. ಏನೂ ಪ್ರತಿಕ್ರಿಯೆ ಇಲ್ಲ. ಖಂಡಿತಾ ಏನೋ ಅನಾಹುತ ಆಗಿದೆ ಅಂದುಕೊಂಡು ಜೋರಾಗಿ ಒದ್ದು ಬಾಗಿಲು ತೆರೆದು ನೋಡಿದರೆ ಅಮಿತ್ ಅಲ್ಲಿಲ್ಲ! ಎದೆಗಳು ಬಡಿದುಕೊಳ್ಳಲಾರಂಭಿಸಿದವು! ಹಾಗಾದರೆ ಅಮಿತ್ ಎಲ್ಲಿ? ಎದುರಿಗೆ ನಿಂತದ್ದು ಬೃಹದಾಕಾರದ ಪ್ರಶ್ನೆ!

ನನ್ನ ಕಿಸೆಯಲ್ಲಿಯ ಮೊಬೈಲ್ ಸದ್ದು ಮಾಡಿತು. ತೆಗೆದು ನೋಡಿದರೆ... ಅಮಿತ್ ಕಾಲ್ ಮಾಡಿದ್ದ! ಕ್ಷೀಣ ಸ್ವರದಲ್ಲಿ ಹೇಳಿದ – 'ಹೇಗಿದೆ ಕಥೆಯ ಕೊನೆ? ಅಮೆರಿಕ ಮುಟ್ಟಿದ ತಕ್ಷಣ ಫೋನ್ ಮಾಡ್ತಿದ್ದೇನೆ. ಬ್ಯಾಗಿನಲ್ಲಿ ಒಂದು ಪೋರ್ಟೆಬಲ್ ಟ್ರಾನ್ಸ್‌ಮಿಟರ್ ಇಟ್ಟುಕೊಂಡೇ ಬಂದಿದ್ದೆ. ಸೇಫಾಗಿ ಮುಟ್ಟಿದ್ದೇನೆ. ಅಲ್ಲಿ ಮಧ್ಯರಾತ್ರಿ, ಇಲ್ಲಿ ಈಗ ನಡುಹಗಲು. ಮೂವರಿಗೂ ಬೈ.'

ನಾವು ಮೂವರೂ ಅಕ್ಷರಶಃ ಮಂತ್ರಮುಗ್ಧರಾಗಿದ್ದೆವು.

ಅದಕ್ಕೇ ಆರಂಭದಲ್ಲೇ ಹೇಳಿದ್ದು ಆ ಸಂಜೆಯನ್ನು ನೆನೆಸಿಕೊಂಡರೆ ಈಗಲೂ ನನಗೆ ಮೈನಡುಕ, ರೋಮಾಂಚನ ಅಂತ.


**ಅರವಿಂದ ಮಿಶ್ರಾ**

ಮೀನುಗಾರಿಕಾ ಇಲಾಖೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದವರುವ ಲೇಖಕರು ಕಳೆದ ಮೂರು ದಶಕಗಳಿಂದ ವೈಜ್ಞಾನಿಕ ಕತೆ, ಲೇಖನಗಳನ್ನು ಬರೆಯುತ್ತಿದ್ದಾರೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಅವರ ಬರಹಗಳು ಬೆಳಕು ಕಂಡಿವೆ. ಇವರ ಅನೇಕ ಕತೆಗಳು ವಿದೇಶಿ ಭಾಷೆಗಳಿಗೆ ಅನುವಾದಗೊಂಡಿವೆ. ಪ್ರಸ್ತುತ ಉತ್ತರ ಪ್ರದೇಶದ ಜೌನಪುರದ ನಿವಾಸಿ.

**ಹ.ಶಿ. ಭೈರನಟ್ಟಿ**

ಕತೆ, ಕವನ, ಕಾದಂಬರಿ, ವಿನೋದ ಪ್ರಬಂಧ, ಪ್ರವಾಸ ಲೇಖನ ಸೇರಿದಂತೆ ಅನೇಕ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. ಇದುವರೆಗೆ 24 ಕೃತಿಗಳನ್ನು ಪ್ರಕಟಿಸಿದ್ದಾರೆ. ಫೊಟೊಗ್ರಫಿ, ಸಂಗೀತ, ಪ್ರವಾಸ ಇವರ ಹವ್ಯಾಸಗಳು. ಪ್ರಸ್ತುತ ಧಾರವಾಡದಲ್ಲಿ ವಾಸ.